ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ. 286/2022,

ಚಾಸಾ-5 , ಫ್ರಾಸಾ -3

| | |
|---|---|
| ಹೆಸರು | ಬಸವರಾಜು ಎನ್ |
| ತಂದೆಯ ಹೆಸರು | ನಾಗೇಂದ್ರ |
| ವಯಸ್ಸು | 25 ವರ್ಷ |
| ಕೆಲಸ | ಪೊಲೀಸ್ ಪೇದೆ , ನಗರ ಶಸ್ತ್ರಸ್ತ ಮೀಸಲು ಪಡೆ |
| ವಾಸ | ಮಂಗಳೂರು |
| ಪ್ರಮಾಣೀಕರಿಸಿದ ದಿನಾಂಕ | 27-02-2024 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಚಾಸಾ-1 ಮತ್ತು ಚಾಸಾ-2 ಗೊತ್ತಿಲ್ಲ . ಮೃತ ಬಾಹು ಬ್ಯಾರಿ ಗೊತ್ತಿಲ್ಲ . ಆರೋಪಿ ಗೊತ್ತು . ದಿಃ 27-12-2020 ರಂದು ನಾನು ಹಾಗೂ ಚಾಸಾ-4 ಮತ್ತು ಚಾಸಾ-6 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾ ಮೂರ್ತಿಗಳಾದ ಗೌರವಾನ್ವಿತ ಅಬ್ದುಲ್ ನಜೀರ್ ಸಾಹೇಬರವರು ಮೂಡಬಿದ್ರೆಗೆ ಬರುತ್ತಿದ್ದು , ನಮಗೆ ಆ ಬಗ್ಗೆ ಎಸ್ಕಾರ್ಟ್ ಡ್ಯೂಟಿಗೆ ಹಾಕಿದ್ದು , ವೇಣೂರು - ಮೂಡಬಿದ್ರೆಯ - ಹೊಸಂಗಡಿಯ ಬಳಿ ಹೋಗಬೇಕೆಂದು ತಿಳಿಸಿರುತ್ತಾರೆ . ಅದರಂತೆ ಮಂಗಳೂರು ನಗರ ಮೀಸಲು ಪಡೆಯಿಂದ ಹೊರಟು ಮೂಡಬಿದ್ರೆ ಮಾರ್ಗವಾಗಿ ಹೋಗುವಾಗ ವಿದ್ಯಾಗಿರಿ ಜಂಕ್ಷನ್ ಬಳಿ ನಮ್ಮ ಎದುರುಬದಿಯ ಬಲಗಡೆಯಿಂದ ಅತೀ ವೇಗವಾಗಿ ಒಂದು ಸ್ಕೂಟರ್ ಬಂದು ನಮ್ಮ ಜೀಪಿಗೆ ಡಿಕ್ಕಿ ಪಡಿಸಿರುತ್ತದೆ . ಆಗ ನಮ್ಮ ವಾಹನ ಎಡಭಾಗದಲ್ಲಿ ಚಲಿಸುತ್ತಿತ್ತು .

ಆ ನಂತರ ನಾನು , ಚಾಸಾ-4 ಮತ್ತು ಚಾಸಾ-6 ಸ್ಕೂಟರ್ ಸವಾರನ ತಲೆಗೆ ಹಾಗೂ ದೇಹದ ಇತರೆ ಭಾಗಗಳಿಗೆ ಪೆಟ್ಟಾಗಿರುತ್ತದೆ . ಅವರು ಅರೆ ಪ್ರಜ್ಞಾವಸ್ಥೆಯಲ್ಲಿ ಇದ್ದು , ಸ್ಥಳೀಯರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ . ಮೃತರ ತಪ್ಪಿನಿಂದ ಅಪಘಾತ ಆಗಿರುತ್ತದೆ . ಆ ನಂತರ ಅವರು ಮೃತ ಪಟ್ಟಗೆ ತಿಳಿದು ಬಂದಿರುತ್ತದೆ .

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

ದಿಃ 27-12-2021 ರಂದು ಸಮಯ ಬೆಳಿಗ್ಗೆ 9-45 ಗಂಟೆಗೆ ಅಪಘಾತವು ಆಗಿರುತ್ತದೆ ಎಂದರೆ ಸರಿ . ಆ ದಿನ ನಮ್ಮ ಇಲಾಖಾ ವಾಹನವನ್ನು ಆರೋಪಿ ಚಲಾಯಿಸುತ್ತಿದ್ದರು ಎಂದರೆ ಸರಿ. ಆರೋಪಿ ಅತೀವೇಗ ಹಾಗೂ ಅಜಾಗರೂಕತೆಯಿಂದ ಜೀಪನ್ನು ಚಲಾಯಿಸಿಕೊಂಡು ಹೋಗಿ ಸ್ಕೂಟರಿಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ . ಇದರಿಂದಾಗಿ ಸ್ಕೂಟರ್ ಸವಾರ ಬಾಹು ಬ್ಯಾರಿಯವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಹೇಳಿಕೆ ಮತ್ತು ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ . ಅಪಘಾತವನ್ನು ಕಣ್ಣಾರೆ ಕಂಡರೂ ಸಹ ಆರೋಪಿಯು ಸಹೋದ್ಯೋಗಿಯಾದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ